# Telephone conversation between Prime Minister and State Counsellor of Myanmar Daw Aung San Suu Kyi

April 30, 2020

## ಪ್ರಧಾನ ಮಂತ್ರಿ ಮತ್ತು ಮ್ಯಾನ್ಮಾರ್ ರಾಜ್ಯ ಕೌನ್ಸಿಲರ್ ದಾವ್ ಆಂಗ್ ಸಾನ್ ಸೂ ಕಿ ನಡುವೆ ದೂರವಾಣಿ ಸಂಭಾಷಣೆ

ಏಪ್ರಿಲ್ 30, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಯವರು 30 ಏಪ್ರಿಲ್ 2020 ರಂದು ಮ್ಯಾನ್ಮಾರ್ ಗಣರಾಜ್ಯದ ರಾಜ್ಯ ಕೌನ್ಸಿಲರ್ ದಾವ್ ಆಂಗ್ ಸಾನ್ ಸೂ ಕಿ ರವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದರು.

ದೇಶೀಯ ಮತ್ತು ಪ್ರಾದೇಶಿಕ ಸನ್ನಿವೇಶಗಳಲ್ಲಿ ಹೆಚ್ಚುತ್ತಿರುವ COVID 19 ಸನ್ನಿವೇಶವನ್ನು ನಾಯಕರು ಚರ್ಚಿಸಿದರು ಮತ್ತು ಸಾಂಕ್ರಾಮಿಕ ರೋಗ ಹರಡುವುದನ್ನು ನಿಯಂತ್ರಿಸಲು ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ಪರಸ್ಪರ ಅಪ್ಡೇಟ್ ಮಾಡಿದರು.

ಭಾರತದ ನೆರೆಹೊರೆಯ ಮೊದಲ ನೀತಿಯ ಪ್ರಮುಖ ಆಧಾರಸ್ತಂಭವಾಗಿ ಮ್ಯಾನ್ಮಾರ್‌ನ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತಾ, COVID 19 ರ ಆರೋಗ್ಯ ಮತ್ತು ಆರ್ಥಿಕ ಪರಿಣಾಮವನ್ನು ತಗ್ಗಿಸಲು ಮ್ಯಾನ್ಮಾರ್‌ಗೆ ಸಾಧ್ಯವಿರುವ ಎಲ್ಲಾ ಬೆಂಬಲವನ್ನು ನೀಡಲು ಭಾರತದ ಸಿದ್ಧತೆಯ ಬಗ್ಗೆ ಪ್ರಧಾನ ಮಂತ್ರಿ ಮೋದಿಯವರು ತಿಳಿಸಿದರು.

ಭಾರತದಲ್ಲಿ ಇರುವ ಮ್ಯಾನ್ಮಾರ್ ನಾಗರಿಕರಿಗೆ ಭಾರತ ಸರ್ಕಾರದಿಂದ ಸಾಧ್ಯವಿರುವ ಎಲ್ಲಾ ಬೆಂಬಲವನ್ನು ನೀಡುವುದಾಗಿ ಪ್ರಧಾನ ಮಂತ್ರಿಯವರು ಭರವಸೆ ನೀಡಿದರು ಮತ್ತು ಮ್ಯಾನ್ಮಾರ್‌ನಲ್ಲಿರುವ ಭಾರತೀಯ ನಾಗರಿಕರಿಗೆ ಮ್ಯಾನ್ಮಾರ್ ಅಧಿಕಾರಿಗಳು ನೀಡಿದ ಸಹಕಾರಕ್ಕಾಗಿ ರಾಜ್ಯ ಸಲಹೆಗಾರರಿಗೆ ಧನ್ಯವಾದ ತಿಳಿಸಿದರು. COVID-19 ನಿಂದ ಪ್ರಸ್ತುತ ಮತ್ತು ಭವಿಷ್ಯದ ಸವಾಲುಗಳನ್ನು ಎದುರಿಸಲು ನಾಯಕರು ಸಂಪರ್ಕದಲ್ಲಿರಲು ಹಾಗೂ ಒಟ್ಟಾಗಿ ಕೆಲಸ ಮಾಡಲು ಒಪ್ಪಿದರು.

**ನವ ದೆಹಲಿ**
**ಏಪ್ರಿಲ್ 30, 2020**

DISCLAIMER: This is an approximate translation. The original is available in English on MEA’s website and may be referred to as the official press release.